**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 39/2013**

ದಿನಾಂಕಃ 09.03.2020
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 12 ಪ್ರಾಸಾ - 8

| | | |
|---|---|---|
| ಹೆಸರು | ಃ | ಚಿನ್ನನರಸಮ್ಮ |
| ತಂದೆಯ/ಗಂಡನ ಹೆಸರು | ಃ | ಚಿಕ್ಕನರಸಿಂಹಯ್ಯ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಗೊಲ್ಲರದೊಡ್ಡಿ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಮೃತೆ ಸುಕನ್ಯ ನನಗೆ ಗೊತ್ತು. ಆಕೆ ಎಷ್ಟು ವರ್ಷಗಳ ಹಿಂದೆ ಮತ್ತು ಎಲ್ಲಿ ಮೃತ ಹೊಂದಿದಳು ಎಂಬುವುದು ನನಗೆ ಗೊತ್ತಿಲ್ಲ. ಆಕೆ ಆರೋಪಿ ಹನುಮಂತರಾಜುವಿನ ಹೆಂಡತಿ.

2. ಸುಕನ್ಯ ತನ್ನ ಗಂಡ ಹಾಗು ಅತ್ತೆ ಮಾವಂದಿರ ಜೊತೆಯಲ್ಲಿ ವಾಸವಾಗಿದ್ದಳು. ನಾನು ಸಹ ಆರೋಪಿ ಹನುಮಂತರಾಜುವಿನ ಊರಿನವಳು. ನನ್ನ ಮನೆ ಆರೋಪಿ ಮನೆಯಿಂದ 3-4 ಮನೆಗಳ ದೂರದಲ್ಲಿದೆ. ಸುಕನ್ಯಳಿಗೆ ಮಕ್ಕಳು ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

3. ಆರೋಪಿ ಮನೆಯಲ್ಲಿ ಆರೋಪಿತರು ಸುಕನ್ಯಳನ್ನು ಹೇಗೆ ನೋಡಿಕೊಳ್ಳುತ್ತಿದ್ದರು ಎಂಬುವುದಾಗಿ ನನಗೆ ಗೊತ್ತಿಲ್ಲ ಹಾಗು

ಅವರುಗಳ ಸಂಸಾರದ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ಅವಳ ಸಾವಿನ ಕಾರಣದ ಬಗ್ಗೆ ಸಹ ನನಗೆ ಗೊತ್ತಿಲ್ಲ.

4. ಆರೋಪಿಗಳ ವಿರುದ್ಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>**

5. ಆರೋಪಿಗಳು ಸುಕನ್ಯಳನ್ನು ವರದಕ್ಷಿಣೆ ಕಿರುಕುಳಕ್ಕೆ ಒಳಪಡಿಸಿದ್ದು, ಸುಕನ್ಯಳು ಈ ಬಗ್ಗೆ ನನಗೆ ಎಲ್ಲಾ ತಿಳಿಸಿದ್ದಳು ಎಂದರೆ ಸರಿಯಲ್ಲ. ಸುಕನ್ಯಳು ಸೂಚಿಸಿದಂತೆ ನನಗೆ ಹೇಳಿದ ಸಂಗತಿಗಳನ್ನು ನಮೂದಿಸಿ ನಾನು ಈಗ ನನಗೆ ಓದಿ ಹೇಳಿದ ದಾಖಲೆಯಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ದಾಖಲೆಯನ್ನು ಈಗ ನಿಶಾನೆ ಪಿ 20 ಎಂದು ಗುರುತು ಮಾಡಲಾಯಿತು.

6. ನಿಶಾನೆ ಪಿ 20 ರಂತೆ ನಾನು ಹೇಳಿಕೆ ನೀಡಿದ್ದರೂ ಸಹ, ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

<u>**ಪಾಟೀ ಸವಾಲುಃ**</u> **ಶ್ರೀ.ಬಿ.ಆರ್. ವಕೀಲರಿಂದ – ಆರೋಪಿಗಳ ಪರವಾಗಿಃ- ಇರುವುದಿಲ್ಲ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.